'ಕವಲು' ಮತ್ತು 'ಆವರಣ' ಕಾದಂಬರಿಗಳ ನಂತರ ಭೈರಪ್ಪನವರ ಪುಸ್ತಕಗಳ ಮಾರಾಟ ಹೆಚ್ಚಾಯಿತಾದರೂ ಅವರ ವ್ಯಾಪಕ ಓದುಗರ ಸಮೂಹ ಬೇರೆ ಬೇರೆಯೇ ಆಗಿಬಿಟ್ಟಿತೆನ್ನಬೇಕು.

* * *

ದಕ್ಷಿಣ ಕನ್ನಡ ಜಿಲ್ಲೆಯ ಒಂದು ಕಾಲೇಜಿನಲ್ಲಿ ಅವರಿಗಾದ ಸನ್ಮಾನ ಕಾರ್ಯಕ್ರಮದಲ್ಲಿ ನಾನು ಮತ್ತು ತಾರಾನಾಥ ಭಾಗವಹಿಸಿದ್ದೆವು. ಅಂದು ಅವರ 'ವಂಶವೃಕ್ಷ' ಕಾದಂಬರಿಯ ಒಂದು ಪ್ರಸಂಗವನ್ನು ಉಲ್ಲೇಖಿಸಿ ಮಾತನಾಡಿದ್ದೆ.

ಶ್ರೀನಿವಾಸ ಶ್ರೋತ್ರಿಗಳು ಜೀವಿತಾಂತ್ಯದಲ್ಲಿ ಕಾಶಿಯ ಕಡೆ ಪ್ರಯಾಣ ಮಾಡುವ ಕಡೇ ಗಳಿಗೆಯಲ್ಲಿ, ಮೊಮ್ಮಗ ಚೀನಿ ಬಂದು, ತೀರಿಕೊಂಡ ತಾಯಿಯ ಶವಸಂಸ್ಕಾರ ಮಾಡಬಹುದೇ ಎಂದು ಕೇಳುತ್ತಾನೆ. ಆಗ ಶ್ರೋತ್ರಿಯರು, 'ಮಗು ಮತ್ತೊಬ್ಬರ ಪಾಪ, ಪುಣ್ಯಗಳನ್ನು ನಿರ್ಣಯಿಸುವುದಕ್ಕೆ ಅಧಿಕಾರವಿಲ್ಲ. ಅದರಲ್ಲೂ ಮಾತಾಪಿತೃಗಳ ಜೀವನವನ್ನು ಅಳೆಯುವುದು ಮಹಾಪಾಪ. ಕರ್ಮಗಳನ್ನು ಮಾಡೋದು ಮಾತ್ರ ನಮ್ಮ ಕರ್ತವ್ಯ. ನೀನು ಶ್ರದ್ಧಾಭಕ್ತಿಗಳಿಂದ ನಿಮ್ಮಮ್ಮನ ಎಲ್ಲ ಉತ್ತರ ಕ್ರಿಯೆಗಳನ್ನೂ ನಡೆಸು' ಎನ್ನುತ್ತಾರೆ. ಈ ಕಾದಂಬರಿಯನ್ನು ಬರೆದು ಎಷ್ಟೋ ವರ್ಷಗಳಾಯಿತು. 'ಕವಲು', 'ಆವರಣ' ಕೃತಿಗಳ ನಂತರ ಅವರದೇ ಬರವಣಿಗೆಯ ಹಿಂದಿನ ಮನೋಧರ್ಮ ಉಳಿದಿತ್ತೇ? ಅಷ್ಟೇ ಅಲ್ಲ, 'ಮಂದ್ರ' ಕಾದಂಬರಿಯ ಆರಂಭವೇ ಸಂಗೀತಗಾರನ ಹೆಣ್ಣನ್ನು ಕುರಿತ ಬೈಗುಳಿಂದಲೇ ಆರಂಭವಾಗುತ್ತದೆ. 'ದಾಟು' ಕಾದಂಬರಿಯಲ್ಲಿಯೂ ಇಂಥ ವಾಕ್ಯಗಳಿವೆ. 'ಪರ್ವ' ಕೃತಿಯಲ್ಲೂ ಕರ್ಣನು ತನ್ನ ಸೈನಿಕರನ್ನು ಯುದ್ಧಕ್ಕೆ ಪುಸಲಾಯಿಸುವಾಗ ನಿಮಗೆ ದುರ್ಯೋಧನನಿಂದ ಚಿನ್ನ, ಬೆಳ್ಳಿ, ಕಾಸು ಇದನ್ನೆಲ್ಲಾ ನೀಡಿಸುವುದಷ್ಟೇ ಅಲ್ಲ, ಭೋಗಕ್ಕಾಗಿ ಆಗತಾನೇ ಮೈನೆರೆದ ಹುಡುಗಿಯರನ್ನು ಕೊಡಿಸುತ್ತೇನೆ ಎನ್ನುತ್ತಾನೆ. ಇದು 'ಪರ್ವ' ನಾಟಕದಲ್ಲೂ ಇದ್ದು, ಕೃಷ್ಣನನ್ನು ಧೃತರಾಷ್ಟ್ರ ತೀವ್ರತರದಲ್ಲಿ ಹಳಿಯುವ ದೃಶ್ಯವೂ ಕಂಡು ಬಂದು ಅದರ ಹಸ್ತಪ್ರತಿಯನ್ನು ನಾಟಕದ ತಾಲೀಮಿಗಿಂತ ಮೊದಲು ಓದಲು ಕೊಟ್ಟಿದ್ದರು. ಭೈರಪ್ಪನವರು 'ಪರ್ವ' ಕಾದಂಬರಿ ರಚನೆಗಾಗಿ ಹಿಮಾಲಯ ಸುತ್ತಿದ್ದಲ್ಲದೆ, ಬಹುಪತಿ ಪದ್ಧತಿಯ ಚಕ್ರಾತ ಬುಡಕಟ್ಟು ಸಮೂಹದ ಜನವನ್ನೂ ಅವರ ಜೀವನ ಕ್ರಮಗಳನ್ನೂ ಕಂಡಿದ್ದರು ನಿಜ. ನಾನು ದೂರವಾಣಿಯಲ್ಲಿ ಭೈರಪ್ಪನವರಿಗೆ ಕಾದಂಬರಿಯಲ್ಲೂ, ನಾಟಕದಲ್ಲೂ ಅಂಥ ಶಬ್ದ, ವಾಕ್ಯಗಳು ಇಲ್ಲದಿದ್ದರೂ ನಡೆಯುತ್ತದೆ, ತೆಗೆಯಬಹುದು ಎಂದಿದ್ದೆ. 'ಕುಮಾರವ್ಯಾಸನಲ್ಲಿ ಕರ್ಣನ ಪಾತ್ರವನ್ನೂ, ಕರ್ಣ ಪರ್ವದ ಕೊನೆಯಲ್ಲಿ ಆ ಪಾತ್ರದ ಅಂತ್ಯದ ಘನತೆಯನ್ನೂ ಗಮನಿಸಿದ್ದೀರಾ' ಎಂದೆ. ಭೈರಪ್ಪನವರು 'ಕುಮಾರವ್ಯಾಸನನ್ನು ಓದಿದರೆ ನನ್ನ ಕಾದಂಬರಿಯ ಮೇಲೆ ಅವನ ಪ್ರಭಾವವಾಗಿಬಿಡುತ್ತದೆ, ಓದಿಲ್ಲ' ಎಂದರು.

ಭೈರಪ್ಪನವರು ತಮ್ಮ ಮನೋಧರ್ಮದ್ದೇ ಮಾದರಿಯ ಬರಹ, ಇನ್ನಿತರ ಜೀವನ ನಿರ್ಧಾರ ಸಂಗತಿಗಳನ್ನು ಅಷ್ಟು ಸುಲಭಕ್ಕೆ ಬದಲಿಸುವವರಲ್ಲ ಎಂಬುದು ನನಗೆ ಗೊತ್ತಿತ್ತು.

ಅವರು ಆರೇಳು ವರ್ಷಗಳ ಹಿಂದೆ ಮನೆಗೆ ಬಂದು ಮಾತುಕತೆ ಮುಗಿಯುವಲ್ಲಿ ಕತ್ತಲಾಗುತ್ತಿತ್ತು. ಲೈಟು ಹಾಕಲು ಎದ್ದೆ. 'ಲೈಟು ಹಾಕುವುದು ಬೇಡ, ಮುಸ್ಸಂಜೆಯ ಕತ್ತಲೆಯೇ ಇರಲಿ' ಎಂದರು. ಹೊರಗಡೆಯಿಂದ ಬಂದ ಮನೆಯವರು,'ಇದೇನು ಲೈಟೇ ಇಲ್ಲದೆ' ಅಂದರು.

ಭೈರಪ್ಪನವರು ಹೊರಡುವಲ್ಲಿ ಕತ್ತಲಾಗಿರಲು, 'ಬಸ್ಸು ಹತ್ತಿಬಿಡುವೆ' ಎಂದರು. 'ರಿಕ್ಷಾ ಕರೆಯಲೇ' ಎಂದೆ. 'ಇಲ್ಲ, ಬಸ್ಸಿನಲ್ಲೇ ಹೋಗುವೆ, ಮನೆಗೆ ಮೂರೇ ಸ್ಟಾಪು' ಎಂದರು. ಮಳೆ ತುಂತುರು ಬೇರೆ. ಇದಾಗಿ ಎಂಟ್ಟತ್ತು ವರ್ಷಗಳಾದವು. ಅವರ ದೇಹ, ಮನಸ್ಸಿನ ಸ್ವಾಸ್ಥ್ಯ ಏರುಪೇರಾಗುತ್ತಾ ಇತ್ತೀಚಿನ ವರ್ಷಗಳಲ್ಲಿ ನನ್ನ ಅವರ ನಡುವಿನ ಮಾತುಕತೆ ನಿಂತೇಹೋಗಿತ್ತು.

ಅವರು ತೀರಿಕೊಂಡ ದಿನವೂ ಮಧ್ಯಾಹ್ನ ಬಿಸಿಲಿತ್ತು, ಸಂಜೆ ಮಳೆ ಹನಿ ಇತ್ತು. ●

